# ಕಾನೂನು ಕಿರಣ
# KANOONU KIRANA

**ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಕಾನೂನು ಸಾಕ್ಷರತಾ ಪತ್ರಿಕೆ**

**ಸಾರ್ವಜನಿಕ ಹಿತಾಸಕ್ತಿಯಲ್ಲಿ * ಖಾಸಗಿ ಪ್ರಸಾರಕ್ಕೆ ಮಾತ್ರ**

**LEGAL LITERACY NEWS LETTER OF KARNATAKA STATE LAW UNIVERSITY, HUBBALLI**

ಹುಬ್ಬಳ್ಳಿ | ಜೂನ್- 2019 | ಪುಟ-4


## ಜ್ಞಾನದ ಜೊತೆಗೆ ಒಳ್ಳೆಯತನವು ಸೇರಿದರೆ ಸಂಪಾದಿಸಿದ ಜ್ಞಾನಕ್ಕೆ ಯೋಗ್ಯತೆ ಬರುತ್ತದೆ : ಪ್ರೊ. (ಡಾ.) ಆರ್. ವೆಂಕಟ್‌ರಾವ್



ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಸಂಘ ಮತ್ತು ಜೀಮಖಾನಾ, ಕ್ರೀಡೆ ಮತ್ತು ಎನ್.ಎಸ್.ಎಸ್. ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ದಿನಾಂಕ: 04 ನೇ ಜೂನ್ 2019 ರಂದು ಹಮ್ಮಿಕೊಂಡಿತ್ತು. ಡಾ.ರಾಜೇಂದ್ರಕುಮಾರ ಹಿಟ್ಟಣಗಿ, ಸಹಾಯಕ ಪ್ರಾಧ್ಯಾಪಕರು, ಕರಾಕಾವಿ ಕಾನೂನು ಶಾಲೆ, ಇವರು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆಯ ವಾರ್ಷಿಕ ವರದಿಯನ್ನು ಮಂಡಿಸಿದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಮತ್ತು ಎನ್.ಎಲ್.ಎಸ್.ಐ.ಯು., ಬೆಂಗಳೂರಿನ ಗೌರವಾನ್ವಿತ ಕುಲಪತಿಗಳು ಮೇಮೋರ್‍ಯಾಡಂ ಆಫ್ ಅಂಡರ್ ಸ್ಟ್ಯಾಡಿಂಗ್‌ಗೆ ಸಹಿಹಾಕಿದರು. ನಂತರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಕಿರಣವನ್ನು ಬಿಡುಗಡೆ ಮಾಡಲಾಯಿತು.

ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಗೌರವಾನ್ವಿತ ಕುಲಪತಿಗಳಾದ ಪ್ರೊ. (ಡಾ.) ಆರ್. ವೆಂಕಟ್‌ರಾವ್, ಎನ್.ಎಲ್.ಎಸ್.ಐ.ಯು., ಬೆಂಗಳೂರು ಇವರು ಮಾತನ್ನಾಡುತ್ತ, ಪದವಿಯನ್ನು ತೆಗೆದುಕೊಂಡು ವೃತ್ತಿ ಜೀವನವನ್ನು ಅರಸಿ ಹೊರ ನಡೆಯುತ್ತಿರುವ ವಿದ್ಯಾರ್ಥಿಗಳಿಗೆ ಹಡೆದ ತಾಯಿ, ವಿದ್ಯೆಕೊಟ್ಟ ಸಂಸ್ಥೆ ಮತ್ತು ದೇಶವನ್ನು ಎಂದೂ ಮರೆಯಬೇಡಿ ಮತ್ತು ಇವರಿಗೆ ಎಂದೂ ದ್ರೋಹ ಬಗೆಯಬೇಡಿ ಎಂದು ಕಿವಿ ಮಾತನ್ನು ಹೇಳಿದರು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯು ಅತ್ಯಂತ ಶೀಘ್ರವಾಗಿ ಬೆಳವಣಿಗೆಯತ್ತ ಮುನ್ನುಗುತ್ತಿದೆ, ಅತ್ಯಂತ ಕಡಿಮೆ ಸಮಯದಲ್ಲಿ ಗುಣಮಟ್ಟದ ಕೆಲಸ ಮಾಡಿರುವುದು ಶ್ಲಾಘನೀಯ ಎಂದರು.

ಜಗತ್ತಿನಲ್ಲೆ ನಮ್ಮ ಸಂವಿಧಾನವು ಅತ್ಯಂತ ಶ್ರೇಷ್ಠವಾದ ಸಂವಿಧಾನವಾಗಿದೆ, ಆದ್ದರಿಂದ ನಾವೆಲ್ಲರೂ ಸಂವಿಧಾನದ ಆಶಯದಂತೆ ನಡೆದುಕೊಂಡು, ಒಳ್ಳೆಯ ನಾಗರೀಕರಾಗಬೇಕೆಂದು ವಿದ್ಯಾರ್ಥಿಗಳಿಗೆ ಸೂಚಿಸಿದರು.

ಶಿಕ್ಷಣ ಬರಿ ಜ್ಞಾನ ವೃದ್ಧಿಗಾಗಿ ಸಂಪಾದಿಸಿದರೆ ಸಾಲದು ಅದರ ಜೋತೆಗೆ ಒಳ್ಳೆತನವು ಸೇರಿದರೆ ಮಾತ್ರ ಆ ವ್ಯಕ್ತಿಗೆ ಮತ್ತು ಅವನು ಸಂಪಾದಿಸಿದ ಜ್ಞಾನಕ್ಕೆ ಯೋಗ್ಯತೆ ಬರುತ್ತದೆ ಎಂದರು. ಅಭಿಮಾನದಿಂದ, ನಿಸ್ವಾರ್ಥಭಾವದಿಂದ ಹಾಗೂ ಶ್ರದ್ಧೆಯಿಂದ ಮಾಡುವ ಪ್ರತಿಯೊಂದು ಕಾರ್ಯದಲ್ಲಿ ಸಮಗ್ರತೆಯನ್ನು ಕಾಣಲು ಸಾಧ್ಯ, ಹಾಗೇ ಮಾಡಿದ ಕೆಲಸವು ಸಮಾಜದಲ್ಲಿ ಅಂತಹ ವ್ಯಕ್ತಿಯ ಚಾಪನ್ನು ಮೂಡಿಸುತ್ತದೆ ಎಂದರು.

ನಾನೀ ಪಾಲಕೀವಾಲಾ, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿಜೀ, ಪಂಡಿತ್ ಜವಾಹರಲಾಲ ನೆಹರುರವರಂತಹ ಅನೇಕ ಮಹನೀಯರ ನಿದರ್ಶನಗಳನ್ನು ನೀಡುತ್ತ, ಅವರಂತೆ ಸಾರ್ಥಕ ಬದುಕು ಕಟ್ಟಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯು ಹಮ್ಮಿಕೊಂಡ

(ಮೂರನೇ ಪುಟಕ್ಕೆ)

# ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಕಾನೂನು

## ಭಾಗ-3

-ಪ್ರೊ. (ಡಾ.) ಪಿ. ಈಶ್ವರ ಭಟ್
ಕುಲಪತಿಗಳು,
ಕರಾಕಾವಿ, ನವನಗರ, ಹುಬ್ಬಳ್ಳಿ.

## ಶಸ್ತ್ರಸಜ್ಜಿತ ಸಂಘರ್ಷದ ಸಂದರ್ಭದಲ್ಲಿ ಸಾಂಸ್ಕೃತಿಕ ಸೊತ್ತುಗಳ ರಕ್ಷಣೆ

ಸಾಂಸ್ಕೃತಿಕ ಸೊತ್ತುಗಳು ಸೃಜನಶೀಲ ಮಾನವ ಪ್ರತಿಭೆಯ ಕೊಡುಗೆಗಳು, ಸಮಷ್ಟಿ ಪ್ರಯತ್ನದ ಫಲಗಳು ಮತ್ತು ಐತಿಹಾಸಿಕ ಹಾಗೂ ಬೌದ್ಧಿಕ ಪರಂಪರೆಯನ್ನು ಪ್ರತಿಫಲಿಸುವ ಸಾಧನಗಳು. ಅವು ದೇಶೀಯ ಉತ್ಪನ್ನಗಳು ಮಾತ್ರವಲ್ಲ, ಬದಲು ಜಾಗತಿಕ ಸಮಾಜದ ಮಹತ್ವದ ಬಳುವಳಿ. ಆದರೆ ಯುದ್ಧ, ಆಂತರಿಕ ಸಂಘರ್ಷ ಮತ್ತು ಕ್ರಾಂತಿಗಳ ಸಮಯದಲ್ಲಿ ನಡೆಯುವ ಸೈನ್ಯಗಳ ತಿಕ್ಕಾಟ ಅಥವಾ ಯುದ್ಧೋತ್ತರ ಸಮಯದಲ್ಲಿ ನಡೆಯುವ ಲೂಟಿ ಮತ್ತು ಧ್ವಂಸಗಳಿಂದಾಗಿ ಸಾಂಸ್ಕೃತಿಕ ಸೊತ್ತುಗಳು ಹಾನಿಗೊಳ್ಳುತ್ತವೆ ಮತ್ತು ನಶಿಸಿ ಹೋಗುತ್ತವೆ. ಇತಿಹಾಸದಲ್ಲಿ ಹಲವಾರು ನೋವಿನ ಉದಾಹರಣೆಗಳು ಇದಕ್ಕೆ ಸಾಕ್ಷಿಯಾಗಿವೆ. ಕಾರ್ಥೇಜ್ ನಗರವು ಯುದ್ಧಕ್ಕೆ ಬಲಿಯಾದದ್ದು ಗ್ರೀಕ್ ಸಾಂಸ್ಕೃತಿಕ ಸೊತ್ತುಗಳ ನಾಶಕ್ಕೆ ಕಾರಣವಾಯಿತು; ಅಲೆಕ್ಸಾಂಡ್ರಿಯಾದ ಯುದ್ಧದಿಂದ ಹಲವಾರು ಶತಮಾನಗಳ ಸಂಗ್ರಹದ ಗ್ರಂಥಾಲಯವು ಬೆಂಕಿಗೆ ಆಹುತಿಯಾಯಿತು (642 AD); ಕಾನ್‌ಸ್ಟೆಂಟಿನೋಪಲ್ ಪತನದಿಂದ ಅರಮನೆಗಳು ಸುಡಲ್ಪಟ್ಟವು, ಪ್ರಾಚ್ಯವಸ್ತುಗಳು ಸೈನಿಕರ ಮತ್ತು ಕಳ್ಳರ ಪಾಲಾಯಿತು, ಸುಂದರ ಲೋಹ ವಿಗ್ರಹಗಳೆಲ್ಲ ಅವುಗಳ ಲೋಹ ಮೌಲ್ಯಕ್ಕಾಗಿ ಕರಗಿಸಲ್ಪಟ್ಟವು ಮತ್ತು ಗ್ರಂಥಾಲಯಗಳು ದಹಿಸಲ್ಪಟ್ಟವು (1453 AD); ರಕ್ಕಸ ತಂಗಡಿ ಕದನದಿಂದ ವೈಭವಯುತ ವಿಜಯ ನಗರವು ಹಾಳುಹಂಪೆಯಾಯಿತು (1565 AD); ಜಾಗತಿಕ ಯುದ್ಧಗಳು ಕಲಾ ಸಂಪತ್ತಿನ ಮೇಲೆ ಅಗಾಧ ಧಾಳಿಗೆ ಕಾರಣವಾದವು. 1992-93 ರಲ್ಲಿ ಸಾರಜಿವೊದಲ್ಲಿ ಯುಗೋಸ್ಲಾವ್ ಕೈಗೊಂಡ ಯುದ್ಧದಿಂದ ನಾಶಗೊಂಡ ಚರ್ಚುಗಳು, ಮಸೀದಿಗಳು ಮತ್ತು ಗ್ರಂಥಾಲಯಗಳು; 1995ರ ಕೊಲ್ಲಿ ಯುದ್ಧದಿಂದ ಇರಾಕ್‌ನಲ್ಲಿ ನಾಶವಾದ ಕಲಾ ಸಂಪತ್ತು; 2001ರಲ್ಲಿ ಅಫ್ಘಾನ್ ಯುದ್ಧದಲ್ಲಿ ಭಗ್ನಗೊಂಡ ಬಮಿಯನ್ ಬುದ್ಧನ ಮೂರ್ತಿಗಳು ಶಸ್ತ್ರ ಸಜ್ಜಿತ ಸಂಘರ್ಷದಿಂದ ಸಾಂಸ್ಕೃತಿಕ ಆಸ್ತಿಗಳು ನಷ್ಟವಾದ ಇತ್ತೀಚಿನ ಉದಾಹರಣೆಗಳು. ಧಾರ್ಮಿಕ ಅಸಹನೆ, ಅಸೂಯೆ, ಸ್ವಾರ್ಥ, ಮೂರ್ಖತನ ಮತ್ತು ದುರಹಂಕಾರಗಳು ಇದಕ್ಕೆ ಪ್ರೇರಕ ಭಾವಗಳು.

ಸಾಂಸ್ಕೃತಿಕ ಸೊತ್ತುಗಳನ್ನು ಸಂಘರ್ಷಗಳ ಮಧ್ಯೆಯೂ ರಕ್ಷಿಸುವುದು ಜನರ ಕಹಿ ಭಾವನೆಯನ್ನು ದೂರೀಕರಿಸಿ ನಾಗರಿಕ ಮೌಲ್ಯಗಳನ್ನು ಸೇಡಿನ ಅನಾಹುತಗಳಿಂದ ರಕ್ಷಿಸಿದಂತಾಗುತ್ತದೆ ಎಂದು ನ್ಯಾಯಚಿಂತಕರು ಮನಗಂಡದ್ದನ್ನು ಪ್ರಾಚೀನ ಕಾಲದಿಂದಲೂ ನೋಡಬಹುದು. ಅಗ್ನಿಪುರಾಣ ಮತ್ತು ಮನು ಸ್ಮೃತಿಗಳಲ್ಲಿ ಯುದ್ಧ ಗೆದ್ದ ರಾಜರಿಗೆ ಶತ್ರು ರಾಜ್ಯದ ದೇವಾಲಯಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ವಿಧಿಸಿವೆ. ವೇಟ್ಟೆಲ್ (1714-1767) ಎಂಬ ನ್ಯಾಯಚಿಂತಕರು, 'ಸುಂದರ ಕಟ್ಟಡಗಳನ್ನು ಯುದ್ಧದ ಮಧ್ಯೆಯೂ ರಕ್ಷಿಸುವುದು ಕಲೆಯ ಸಾರ್ಥಕತ್ವವನ್ನು ಅರ್ಥಮಾಡಿಕೊಂಡಂತೆ. ಅದನ್ನು ಧ್ವಂಸಗೊಳಿಸುವುದರಿಂದ ಯಾರಿಗೂ ಪ್ರಯೋಜನವಿಲ್ಲ; ಬದಲು ಅಂತಹ ಕೃತ್ಯವು ಮಾನವ ಕುಲದ ಶತ್ರುತ್ವವನ್ನು ವಿಜ್ರಂಬಿಸುತ್ತದೆ' ಎಂದಿದ್ದಾರೆ. 1863ರಲ್ಲಿ ಲೀಬರ್ ಕೋಡ್ ಎಂಬ ಅಂತಾರಾಷ್ಟ್ರೀಯ ಒಪ್ಪಂದವನ್ನು ಮಾಡಿ ಜಯಶೀಲವಾದ ಯುದ್ಧ ರಾಷ್ಟ್ರಗಳು ಚರ್ಚು, ಶಿಕ್ಷಣಸಂಸ್ಥೆಗಳು, ವಸ್ತು ಸಂಗ್ರಹಾಲಯದಲ್ಲಿರುವ ಕಲಾವಸ್ತುಗಳನ್ನು ಸ್ವಾಧೀನ ಪಡಿಸಬಾರದೆಂದೂ, ಕಲೆಯ ಶಾಸ್ತ್ರೀಯ ಕೃತಿಗಳು, ಗ್ರಂಥಾಲಯಗಳು, ವೈಜ್ಞಾನಿಕ ಸಂಗ್ರಹಗಳು ಮತ್ತು ಅಮೂಲ್ಯ ಸಾಧನಗಳು ಧಾಳಿಯಿಂದ ರಕ್ಷಿಸಲ್ಪಡತಕ್ಕವೆಂದೂ ಸಾರಿದೆ. ಇಂಗ್ಲೆಂಡ್, ಇಟಲಿ, ಜರ್ಮನಿ ಮತ್ತು ಜಪಾನುಗಳಲ್ಲಿ ಕೂಡಾ ಇದೇ ರೀತಿಯ ಸಂಹಿತೆಗಳನ್ನು ಅಳವಡಿಸಲಾಯಿತು. 1874ರ ಬ್ರುಸೆಲ್ಸ್ ಘೋಷಣೆಯಲ್ಲಿ ಈ ನೀತಿಗಳನ್ನು ಅಳವಡಿಸಿ ಕಲಾತ್ಮಕ ಕಟ್ಟಡಗಳನ್ನು ರಕ್ಷಿಸಲು ಗುರುತಿಗಾಗಿ ಪತಾಕೆಗಳನ್ನು ಹಾಕಿಕೊಳ್ಳಲು ನಿರ್ದೇಶಿಸಲಾಯಿತು. 1907ರ ಹೇಗ್ ಒಡಂಬಡಿಕೆಯು ಸಾಂಸ್ಕೃತಿಕ ಸೊತ್ತಿಗೆ ಹಾನಿ ತರುವ ದುಷ್ಕೃತ್ಯ ಮಾಡಿದ ರಾಷ್ಟ್ರವು ಸಂತ್ರಸ್ತ ರಾಷ್ಟ್ರಕ್ಕೆ ಪರಿಹಾರ ನೀಡಬೇಕೆಂದು ವಿಧಿಸಿತು. 1922ರ ಹೇಗ್ ವಾಯು ಯುದ್ಧ ನಿಯಮಗಳು, 1935ರ ರೋರಿಚ್ ಕರಾರು ಮತ್ತು 1943ರ ಸ್ನೇಹಿ ರಾಷ್ಟ್ರಗಳ ಘೋಷಣೆಯಲ್ಲಿ ಸಾಂಸ್ಕೃತಿಕ ಆಸ್ತಿಯು ತಟಸ್ಥ ಅಂಶದ್ದೆಂದೂ ಅದನ್ನು ಗೌರವಿಸಿ ರಕ್ಷಿಸುವ

(ನಾಲ್ಕನೇ ಪುಟಕ್ಕೆ)

## ಸಂಪಾದಕೀಯ

ನಮ್ಮ ಕಾನೂನು ವ್ಯವಸ್ಥೆಯ ಕಾರ್ಯಚರಣೆಯು ನ್ಯಾಯಸಾಧನೆಗೆ ದಾರಿಯಾಗಬೇಕೆಂದೂ, ರಾಜ್ಯವು ಸರ್ವರಿಗೂ ಸಮಾನ ನ್ಯಾಯವನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊತ್ತಿದೆಯೆಂದೂ ಹೇಳುವ ಸಾಂವಿಧಾನಿಕ ನಿರ್ದೇಶನದ (ಅನುಚ್ಛೇದ 39 A) ಇಂಗಿತವು ಕಾನೂನಿಗೂ ನ್ಯಾಯಕ್ಕೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸುವುದಲ್ಲದೆ ಕಾನೂನು ನೆರವಿನ ಧೋರಣೆಯ ತಿರುಳು ಕೂಡಾ ಆಗಿದೆ. ಜನಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡಿಸುವುದು ಕಾನೂನು ನೆರವು ಕಾರ್ಯಕ್ರಮದ ಅನಿವಾರ್ಯ ಭಾಗವಾಗಿದೆ. ಕಾನೂನು ನೆರವು ಕೇಂದ್ರ (legal aid clinic) ಮತ್ತು ಕಾನೂನು ಸಾಕ್ಷರತಾ ಆಂದೋಲನದ ಮೂಲಕ ಕಾನೂನು ವಿದ್ಯಾರ್ಥಿಗಳು ತಮ್ಮನ್ನು ತಾವು ಸಾಮುದಾಯಿಕ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುವುದು ಕಾನೂನಿನ ಸಾಮಾಜಿಕ ಪ್ರಸ್ತುತತೆಯನ್ನು, ಸುಖೀ ಪ್ರಜಾಪ್ರಭುತ್ವದ ಆಯಾಮವನ್ನು ಹಾಗೂ ಕಾನೂನು ಕಾರ್ಯಾಚರಣೆಯ ಪ್ರಕ್ರಿಯೆಯನ್ನು ಅರಿತುಕೊಳಳಲು ಬಹಳಷ್ಟು ಸಹಾಯ ವಾಗುತ್ತವೆ. ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಸೇವಾಸಕ್ತ ಸಂಘಟನೆಗಳೊಂದಿಗೆ ಪಾಲುಗಾರಿಕೆ ಯಿಂದ ಕಾರ್ಯ ನಿರ್ವಹಿಸುವುದು ವಿದ್ಯಾರ್ಥಿಗಳ ಕೌಶಲ್ಯವರ್ಧನೆಗೂ ಅವಕಾಶ ಮಾಡಿಕೊಡುತ್ತದೆ.

ಮೇಲಿನ ಧ್ಯೇಯಕ್ಕೆ ಪೂರಕವಾಗಿರುವ ಹಾಗೂ ಸಾರ್ವಜನಿಕರಿಗೆ ಕಾನೂನು ಮಾಹಿತಿಯನ್ನು ಪ್ರಸರಿಸುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ **'ಕಾನೂನು ಕಿರಣ'** 2019ನೇ ಇಸವಿಯ ಜೂನ್ ಸಂಚಿಕೆ ನಿಮ್ಮ ಮುಂದಿದೆ. ಈ ಸಾಕ್ಷರತಾ ಪತ್ರಿಕೆಯ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲು ಹಾಗೂ ವಿಶ್ವವಿದ್ಯಾಲಯದ ಕಾನೂನು ಸಾಕ್ಷರತಾ/ ನೆರವು ಕಾರ್ಯಕ್ರಮಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಲು ನಿಮ್ಮ ಸಲಹೆಗೆ ಸ್ವಾಗತ.

**ನಿಮ್ಮ ವಿಶ್ವಾಸಿ,**
**ಪ್ರೊ. (ಡಾ.) ಪಿ. ಈಶ್ವರ ಭಟ್**
ಕುಲಪತಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ.

## ಸಂಪಾದಕೀಯ ಮಂಡಳಿ

| | |
|---|---|
| **ಪ್ರೊ. (ಡಾ.) ಪಿ. ಈಶ್ವರ ಭಟ್**<br>ಕುಲಪತಿಗಳು<br>ಕರಾಕಾವಿ, ಹುಬ್ಬಳ್ಳಿ. | **ಪೋಷಕರು** |
| **ಪ್ರೊ. ಡಾ. ಸಿ. ಎಸ್. ಪಾಟೀಲ**<br>ಡೀನ್ ಮತ್ತು ನಿರ್ದೇಶಕರು,<br>ಕರಾಕಾವಿ ಕಾನೂನು ಶಾಲೆ, ಹುಬ್ಬಳ್ಳಿ. | **ಸಲಹೆಗಾರರು** |
| **ಡಾ. ರತ್ನಾ ಭರಮಗೌಡರ**<br>ಕುಲಸಚಿವರು (ಪ್ರಭಾರ)<br>ಕರಾಕಾವಿ, ಹುಬ್ಬಳ್ಳಿ. | **ಸಲಹೆಗಾರರು** |
| **ಡಾ. ಜಿ. ಬಿ. ಪಾಟೀಲ**<br>ಕುಲಸಚಿವರು ಮೌಲ್ಯಮಾಪನ (ಪ್ರಭಾರ),<br>ಕರಾಕಾವಿ, ಹುಬ್ಬಳ್ಳಿ. | **ಸಲಹೆಗಾರರು** |
| **ಡಾ. ಭೀಮಾಬಾಯಿ ಎಸ್. ಮೂಲಗೆ**<br>ಸಹಾಯಕ ಪ್ರಾಧ್ಯಾಪಕರು,<br>ಕರಾಕಾವಿ, ಹುಬ್ಬಳ್ಳಿ. | **ಸದಸ್ಯರು** |
| **ಡಾ. ರಂಗಸ್ವಾಮಿ ಡಿ.**<br>ಸಹಾಯಕ ಪ್ರಾಧ್ಯಾಪಕರು,<br>ಕರಾಕಾವಿ, ಹುಬ್ಬಳ್ಳಿ. | **ಸದಸ್ಯರು** |
| **ಶ್ರೀ. ಸುನಿಲ ಬಾಗಡೆ**<br>ಸಹಾಯಕ ಪ್ರಾಧ್ಯಾಪಕರು,<br>ಕರಾಕಾವಿ, ಹುಬ್ಬಳ್ಳಿ. | **ಸದಸ್ಯರು** |

# ಕರ್ನಾಟಕ ಜೀವ ರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ, ನಿಯಂತ್ರಣ) ವಿಧೇಯಕ, 2016

ಶ್ರೀ ಸುನಿಲ ಎಸ್. ಬಾಗಡೆ
ಸಹಾಯಕ ಪ್ರಾಧ್ಯಾಪಕರು, ಕರಾಕಾವಿ, ಹುಬ್ಬಳ್ಳಿ

ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಕಳವಳಿಯ ಸಂಗತಿಯಾಗಿದೆ. ಸದರಿ ಅಪಘಾತದಲ್ಲಿ ಗಾಯಾಳುಗಳ ಸಾವಿನ ಸಂಖ್ಯೆ ಹೆಚ್ಚಾಗುತ್ತಿರುವುದು ಇನ್ನೂ ವಿಷಾದನೀಯ. ಇದಕ್ಕೆ ಮುಖ್ಯ ಕಾರಣವೆಂದರೆ, ಸರಿಯಾದ ಸಮಯದಲ್ಲಿ ಗಾಯಾಳುವಿಗೆ ಸೂಕ್ತ ಸಹಾಯ ಸಿಗದಿರುವುದು. ಕಾನೂನಿನ ಅಡಕುತೊಡಕುಗಳು ಈ ಒಂದು ಪರಿಸ್ಥಿತಿಗೆ ಕಾರಣವಾಗಿರುವುದು ಕಂಡುಬರುತ್ತದೆ. ಯಾವ ವ್ಯಕ್ತಿ ಗಾಯಾಳುವಿಗೆ ಸಹಾಯ ಮಾಡುತ್ತಾನೋ ಅವನು ಕಾನೂನಿನ ಸುಳಿಯಲ್ಲಿ ಸಿಕ್ಕು ತೊಂದರೆಗೆ ಒಳಪಡುತ್ತಾನೆ. ನ್ಯಾಯಾಲಯಕ್ಕೆ ಅಲೆದಾಡುವ ಪರಿಸ್ಥಿತಿ ಉಂಟಾಗುತ್ತದೆ. ಆದುದರಿಂದ ಜನರು ಗಾಯಾಳುವಿನ ಸಹಾಯಕ್ಕೆ ಮುಂದಾಗುವುದಿಲ್ಲ. ಈ ಪರಿಸ್ಥಿತಿಯನ್ನು ತಡೆಯಲು ಮತ್ತು ಸಹಾಯ ಮಾಡಲು ಮುಂದೆಬರುವ ವ್ಯಕ್ತಿಗಳಿಗೆ ಪ್ರೋತ್ಸಾಹಿಸಲು ಕರ್ನಾಟಕ ಸರ್ಕಾರವು ಕಾನೂನು ರೂಪಿಸಿದೆ. ಇಂಥ ಸಂದರ್ಭಗಳಲ್ಲಿ ನೆರವು ನೀಡುವವರಿಗೆಂದೇ ದೇಶದಲ್ಲಿಯೇ ಮೊದಲ ಬಾರಿಗೆ ಕರ್ನಾಟಕ ಸರ್ಕಾರ 'ಕರ್ನಾಟಕ ಜೀವ ರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ, ನಿಯಂತ್ರಣ) ವಿಧೇಯಕ 2016' ರಚಿಸಿದೆ.

ರಸ್ತೆ, ರೈಲು, ಜಲ ಅಥವಾ ವಾಯು ಅಪಘಾತಗಳಲ್ಲಿ ಮಾರಣಾಂತಿಕವಾಗಿ ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಗೆ ನೆರವಾಗುವವರಿಗೆ ಪೊಲೀಸರಿಂದ ಮತ್ತು ಕೋರ್ಟ್ ವಿಚಾರಣೆ ವೇಳೆ ಉಂಟಾಗುವ ಕಾನೂನಾತ್ಮಕ ಕಿರುಕುಳ ತಪ್ಪಿಸಿ, ಈ ರೀತಿಯ ಪರೋಪಕಾರಿ ಚಟುವಟಿಕೆಗಳನ್ನು ಉತ್ತೇಜಿಸಲು ಈ ವಿಧೇಯಕವನ್ನು ರೂಪಿಸಲಾಗಿದೆ. ವೈದ್ಯಕೀಯ ಭಾಷೆಯಲ್ಲಿ ಅದನ್ನು 'ಗೋಲ್ಡನ್ ಅವರ್' ಎಂದು ಕರೆಯಲಾಗುತ್ತದೆ.

ಈ ಕಾನೂನು ರಚನೆಯಾಗುವ ಪೂರ್ವದಲ್ಲಿ ಅಪಘಾತ ಪ್ರಕರಣಗಳಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವ ಪರೋಪಕಾರಿಗಳು ಕೋರ್ಟ್‌ಗೆ ಅಲೆದಾಡುವ ಪರಿಸ್ಥಿತಿ ಇತ್ತು. ಈ ಕಾರಣ ಅಪಘಾತ ಸಂದರ್ಭದಲ್ಲಿ ಗಾಯಾಳುಗಳ ನೆರವಿಗೆ ಸಾಕಷ್ಟು ಜನ ಮುಂದಾಗುತ್ತಿರಲಿಲ್ಲ. ಇದರ ಪರಿಣಾಮ ಗಾಯಾಳುಗಳಿಗೆ ಸೂಕ್ತ ಸಂದರ್ಭದಲ್ಲಿ ಅಗತ್ಯ ಚಿಕಿತ್ಸೆ ಅಥವಾ ಆಸ್ಪತ್ರೆಗೆ ದಾಖಲಿಸುವಾಗ ವಿಳಂಬವಾಗಿ ಪ್ರಾಣಹಾನಿಯಾದ ಉದಾಹರಣೆಗಳೂ ಇವೆ.

ಅಷ್ಟೇ ಅಲ್ಲದೇ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವವರು ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನೀಡಬೇಕಿತ್ತು. ಇದರಿಂದಾಗಿ ಪೊಲೀಸರು ಹುಡುಕಿಕೊಂಡು ಹೋಗಿ ಅವರನ್ನು ಸಾಕ್ಷಿಗಳಾಗಿ ಪರಿಗಣಿಸುತ್ತಿದ್ದರು.

**ಹೊಸ ವ್ಯವಸ್ಥೆ:** ಅಂಗೀಕಾರವಾಗಿರುವ ವಿಧೇಯಕದಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವವರು ತಮ್ಮ ಹೆಸರು, ವಿಳಾಸ, ದೂರ ವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನೀಡಬೇಕೆಂಬ ನಿಯಮ ರದ್ದಾಗಿದೆ. ಅಷ್ಟೇ ಅಲ್ಲ ಪ್ರತ್ಯಕ್ಷದರ್ಶಿ ಆಗದೇ ಇರುವ ಸನ್ನಿವೇಶದಲ್ಲಿ ಪೊಲೀಸರು ಸಾಕ್ಷಿಯಾಗಬೇಕು ಎಂದು ಒತ್ತಾಯ ಮಾಡಿದಲ್ಲಿ ಅಂತಹ ಪೊಲೀಸ್ ಅಧಿಕಾರಿ ವಿರುದ್ಧ ದೂರು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ.

**ವೆಚ್ಚ ಭರಿಸಲಾಗುತ್ತದೆ :** ಒಂದು ವೇಳೆ ಪರೋಪಕಾರಿ ಠಾಣೆ ಅಥವಾ ಕೋರ್ಟ್ ವಿಚಾರಣೆಗಾಗಿ ಹಾಜರಾದರೆ ಅದರ ವೆಚ್ಚವನ್ನು ಭರಿಸಲಾಗುತ್ತದೆ. ಅದಕ್ಕಾಗಿ ಕರ್ನಾಟಕ ಸರ್ಕಾರ 5 ಕೋಟಿ ರೂ. ಮೊತ್ತದ 'ಪರೋಪಕಾರಿ ನಿಧಿ' ಸ್ಥಾಪಿಸಿ ಅದರಿಂದ ಪಾವತಿ ಮಾಡಲಾಗುತ್ತದೆ.

**ಪ್ರಥಮ ಚಿಕಿತ್ಸೆ ನೀಡಬೇಕು :** ಗಾಯಾಳುಗಳು ಯಾವುದೇ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ದಾಖಲಾದಲ್ಲಿ ವಿಳಂಬ ಮಾಡದೆ ಪ್ರಥಮ ಚಿಕಿತ್ಸೆ ನೀಡಬೇಕು. ಪೊಲೀಸ್ ದೂರು ದಾಖಲಾಗದೆ ಚಿಕಿತ್ಸೆ ನೀಡುವುದಿಲ್ಲ ಎಂದು ಹೇಳುವಂತಿಲ್ಲ. ವಿಳಂಬ ಮಾಡಿದರೆ ಅಥವಾ ಚಿಕಿತ್ಸೆ ನಿರಾಕರಿಸಿ ಗಾಯಾಳು ಮೃತಪಟ್ಟರೆ ಅಂತಹ ಪ್ರಕರಣಗಳಲ್ಲಿ ಆಸ್ಪತ್ರೆ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅವಕಾಶವಿದೆ. ಆಸ್ಪತ್ರೆಗಳು ಮೊದಲ ಬಾರಿ ಎಸಗುವ ಇಂತಹ ತಪ್ಪುಗಳಿಗೆ 10 ಸಾವಿರ ರೂ. 2ನೇ ಬಾರಿ ತಪ್ಪೆಸಗಿದರೆ 50 ಸಾವಿರ ರೂ. ಹಾಗೂ ನಂತರದ ತಪ್ಪುಗಳಿಗೆ 5 ಲಕ್ಷ ರೂ.ವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

## ಇನ್ನು ಮುಂದೆ ?

- ಹೆಸರು ವಿಳಾಸ, ದೂರವಾಣಿ ಸಂಖ್ಯೆ ಕಡ್ಡಾಯವಾಗಿ ನೀಡಬೇಕಾಗಿಲ್ಲ.
- ಸಾಕ್ಷಿಯಾಗಬೇಕೆಂದು ಒತ್ತಾಯ ಮಾಡಿದ ಪೊಲೀಸ್ ಅಧಿಕಾರಿ ವಿರುದ್ಧ ಕೇಸು ದಾಖಲಿಸಲು ಅವಕಾಶ.
- ಕೋರ್ಟ್, ಠಾಣೆಗೆ ವಿಚಾರಣೆಗೆ ಹಾಜ ರಾದರೆ ಅದರ ವೆಚ್ಚ ನೀಡಲಾಗುತ್ತದೆ.
- ಅದಕ್ಕಾಗಿ ಕರ್ನಾಟಕ ಸರ್ಕಾರದಿಂದ 'ಪರೋಪಕಾರಿ ನಿಧಿ' ಸ್ಥಾಪನೆ.
- ಎಲ್ಲಾ ಸರ್ಕಾರಿ, ಖಾಸಗಿ ಆಸ್ಪತ್ರೆಗಳಲ್ಲಿ ವಿಳಂಬ ಮಾಡದೆ, ಕೇಸು ದಾಖಲಾಗಬೇಕು ಎಂದು ಸಬೂಬು ಹೇಳದೆ ಪ್ರಥಮ ಚಿಕಿತ್ಸೆ ನೀಡಬೇಕು.
- ಚಿಕಿತ್ಸೆ ದೊರೆಯದೆ ಗಾಯಾಳು ಮೃತಪಟ್ಟರೆ ಕ್ರಿಮಿನಲ್ ಕೇಸು ದಾಖಲಿಸಲು ಅವಕಾಶ.
- 10 ಸಾವಿರ ರೂ. ಆಸ್ಪತ್ರೆಗಳು ಮೊದಲ ಬಾರಿ ತಪ್ಪೆಸಗಿದರೆ ವಿಧಿಸುವ ದಂಡದ ಮೊತ್ತ
- 50 ಸಾವಿರ ರೂ. 2ನೇ ಬಾರಿಗೆ ಆಸ್ಪತ್ರೆಗಳು ತಪ್ಪೆಸಗಿದರೆ ವಿಧಿಸುವ ದಂಡದ ಮೊತ್ತ
- 5 ಲಕ್ಷ ರೂ. ನಂತರದ ತಪ್ಪುಗಳಿಗೆ ವಿಧಿಸಲಾಗುವ ದಂಡದ ಮೊತ್ತ.

- **4,80,652– 2016ರಲ್ಲಿ ದೇಶದಲ್ಲಿ ನಡೆದ ಅಪಘಾತ ಪ್ರಕರಣಗಳು**
- **1,50,785–ಅಪಘಾತದಲ್ಲಿ ಅಸುನೀಗಿದವರ ಸಂಖ್ಯೆ**
- **5,01,423–2015ರಲ್ಲಿ ದೇಶದಲ್ಲಿ ನಡೆದ ಅಪಘಾತ ಪ್ರಕರಣಗಳು**
- **1,46,133–ಅಪಘಾತದಲ್ಲಿ ಅಸುನೀಗಿದವರ ಸಂಖ್ಯೆ**

## ಜ್ಞಾನದ ಜೊತೆಗೆ................

(ಒಂದನೇ ಪುಟದಿಂದ)

ವಾರ್ಷಿಕ ಕ್ರೀಡಾಕೂಟ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ಎಲ್ಲ ವಿದ್ಯಾರ್ಥಿಗಳಿಗೆ ಮುಖ್ಯ ಅತಿಥಿಗಳು ಸಮಾರಂಭದಲ್ಲಿ ಬಹುಮಾನವನ್ನು ವಿತರಿಸಿದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಪ್ರೊ. (ಡಾ.) ಪಿ. ಈಶ್ವರ ಭಟ್ ಇವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಕಾನೂನು ವಿದ್ಯಾರ್ಥಿಗಳು ಒಳ್ಳೆಯ ಪುಸ್ತಕಗಳನ್ನು ಓದುವ ರೂಢಿಯನ್ನು ಬೆಳೆಸಿಕೊಳ್ಳಲು ಸೂಚಿಸುತ್ತಾ, ಸಮಯದ ಪೂರ್ಣ ಉಪಯೋಗ, ಕಠಿಣ ಪರಿಶ್ರಮ ಮತ್ತು ಸತತ ಪ್ರಯತ್ನ ಒಂದೇ ಯಶಸ್ಸಿಗೆ ದಾರಿಯೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ (ಡಾ.) ಆರ್. ಭರಮಗೌಡರ್, ಕುಲಸಚಿವರು, ಕರಾಕಾವಿ, ಹುಬ್ಬಳ್ಳಿ, ಡಾ. ಜಿ. ಬಿ. ಪಾಟೀಲ್, ಕುಲಸಚಿವರು (ಮೌಲ್ಯಮಾಪನ), ಕರಾಕಾವಿ., ಹುಬ್ಬಳ್ಳಿ, ಪ್ರೊ. (ಡಾ.) ಸಿ.ಎಸ್. ಪಾಟೀಲ್, ಡೀನ್ ಮತ್ತು ನಿರ್ದೇಶಕರು, ಕರಾಕಾವಿ ಹುಬ್ಬಳ್ಳಿ, ಅಹ್ವಾನಿತರು, ಸ್ಪರ್ಧಾಳುಗಳು, ಕರಾಕಾವಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂಧಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ❖

# ಸಾಂಸ್ಕೃತಿಕ ಪರಂಪರೆಯ...

(ಎರಡನೇ ಪುಟದಿಂದ)

ಹೊಣೆಗಾರಿಕೆಯು ಯುದ್ಧ ರಾಷ್ಟ್ರಗಳದ್ದೆಂದೂ ಹೇಳಲಾಯಿತು. 1949ರ ಜಿನೇವಾ ಒಡಂಬಡಿಕೆಯು ಜನರ ಸಾಂಸ್ಕೃತಿಕ ಅಥವಾ ಧಾರ್ಮಿಕ ಬಳುವಳಿಯಾದ ಐತಿಹಾಸಿಕ ಸ್ಮಾರಕಗಳು, ಕಲಾಕೃತಿಗಳು ಅಥವಾ ಆರಾಧನಾ ಸ್ಥಳಗಳ ವಿರುದ್ಧ ಮಾಡುವ ಧಾಳಿಗಳನ್ನು ಅಥವಾ ಅವುಗಳನ್ನು ಯುದ್ಧದ ಶಸ್ತ್ರಗಳನ್ನಾಗಿ ಬಳಸುವುದನ್ನು ನಿಷೇಧಿಸುತ್ತದೆ. ಯುನೆಸ್ಕೋದ ನೇತೃತ್ವದಲ್ಲಿ ನಡೆದ ವ್ಯಾಪಕ ಅಂತಾರಾಷ್ಟ್ರೀಯ ಚರ್ಚೆಯ ಫಲವಾಗಿ ಶಸ್ತ್ರಸಜ್ಜಿತ ಸಂಘರ್ಷಗಳ ಸಂದರ್ಭದಲ್ಲಿ ಸಾಂಸ್ಕೃತಿಕ ಸೊತ್ತುಗಳ ರಕ್ಷಣೆಗೆ ಸಂಬಂಧಿಸಿದ ಹೇಗ್ ಒಡಂಬಡಿಕೆ 1954 ಎಂಬ ಅಂತಾರಾಷ್ಟ್ರೀಯ ಒಡಂಬಡಿಕೆಯು ಜಾರಿಗೆ ಬಂದಿತು.

ಹೇಗ್ ಒಡಂಬಡಿಕೆ 1954ರ ಪ್ರಸ್ತಾವನೆಯಲ್ಲಿ ಹೇಳಿದಂತೆ, ಯಾವ ಜನಸಮುದಾಯಕ್ಕೆ ಸೇರಿದ ಸಾಂಸ್ಕೃತಿಕ ಸೊತ್ತೇ ಆಗಲಿ, ಅದಕ್ಕೆ ಹಾನಿ ಮಾಡುವುದು ಒಟ್ಟು ಮಾನವ ಜನಾಂಗದ ಸಾಂಸ್ಕೃತಿಕ ಪರಂಪರೆಗೆ ತರುವ ಹಾನಿಯೇ ಆಗುತ್ತದೆ; ಯಾಕೆಂದರೆ, ಪ್ರತಿ ಜನ ಸಮುದಾಯವು ಸಾಂಸ್ಕೃತಿಕವಾಗಿ ನೀಡುವ ಕೊಡುಗೆಯ ಮೂಲಕವೇ ಜಗತ್ತಿನ ಸಾಂಸ್ಕೃತಿಕ ಪರಂಪರೆಯು ನಿರ್ಮಾಣವಾಗುತ್ತದೆ. ಆದ್ದರಿಂದ ಎಲ್ಲ ಜನರ ಸಾಂಸ್ಕೃತಿಕ ಸೊತ್ತುಗಳು ಅಂತಾರಾಷ್ಟ್ರೀಯ ರಕ್ಷಣೆ ಪಡೆಯಲು ತಕ್ಕವಾಗಿದೆ.

'ಸಾಂಸ್ಕೃತಿಕ ಸೊತ್ತು' ಎಂಬ ಶಬ್ದವು ಎಲ್ಲಾ ಜನರ ಸಾಂಸ್ಕೃತಿಕ ಪರಂಪರೆಗೆ ಅತ್ಯಂತ ಮಹತ್ವವುಳ್ಳ, ಚರ ಮತ್ತು ಸ್ಥಿರ ಆಸ್ತಿಗಳು. ಅವುಗಳ ಮೂಲ ಮತ್ತು ಮಾಲೀಕತ್ವದ ವಿಚಾರವು ಇಲ್ಲಿ ಅಪ್ರಸ್ತುತ. ಅವುಗಳು ಧಾರ್ಮಿಕ ಅಥವಾ ಧಾರ್ಮಿಕೇತರ ವಾಸ್ತು ಶಿಲ್ಪ, ಕಲೆ ಅಥವಾ ಇತಿಹಾಸದ ಸ್ಮಾರಕಗಳಿರಬಹುದು; ಪ್ರಾಕ್ತನ ನಿವೇಶನಗಳಿರಬಹುದು; ಐತಿಹಾಸಿಕ ಅಥವಾ ಕಲಾತ್ಮಕ ಮಹತ್ವದ ಕಟ್ಟಡಗಳ ಸಮುಚ್ಚಯವಿರಬಹುದು; ಕಲಾಕೃತಿಗಳಿರಬಹುದು; ಕಲೆ, ಇತಿಹಾಸ ಅಥವಾ ಪುರಾತತ್ವ ಮಹತ್ವದ ಹಸ್ತಲೇಖನಗಳು, ಪುಸ್ತಕಗಳು ಅಥವಾ ವಸ್ತುಗಳಿರಬಹುದು; ಸದರಿ ಸೊತ್ತುಗಳ ವೈಜ್ಞಾನಿಕ ಸಂಗ್ರಹಗಳು ಮತ್ತು ಮುಖ್ಯ ಪುಸ್ತಕಗಳು, ದಾಖಲೆಗಳು ಅಥವಾ ಪ್ರತಿಗಳಿರಬಹುದು. ಇವುಗಳನ್ನು ರಕ್ಷಿಸಲಿಕ್ಕಾಗಿಯೇ ಇರುವ ವಸ್ತು ಸಂಗ್ರಹಾಲಯ, ಗ್ರಂಥಾಲಯ, ಲೇಖಾಗಾರ ಮತ್ತು ರಕ್ಷಣಾ ಗೃಹಗಳ ಕಟ್ಟಡಗಳು ಮತ್ತು ಹೆಚ್ಚಿನ ಸಂಖ್ಯೆಯ ಸಾಂಸ್ಕೃತಿಕ ಸೊತ್ತುಗಳ ಕೇಂದ್ರಗಳು ಕೂಡಾ ಸಾಂಸ್ಕೃತಿಕ ಸೊತ್ತಿನ ವ್ಯಾಖ್ಯೆಯ ವ್ಯಾಪ್ತಿಯಲ್ಲಿ ಬರುತ್ತವೆ. ಸಾಂಸ್ಕೃತಿಕ ವೈವಿಧ್ಯತೆಯುಳ್ಳ ರಾಷ್ಟ್ರಗಳಲ್ಲಿ ಭಾಷೆ, ಧರ್ಮ, ವರ್ಗ, ಜಾತಿ ಮತ್ತು ಪ್ರಾದೇಶಿಕ ಭಿನ್ನತೆಗಳೇನೇ ಇದ್ದರೂ ತಾರತಮ್ಯವಿಲ್ಲದೆ ಅವುಗಳನ್ನು ರಕ್ಷಿಸುವುದು ಆಯಾಯ ರಾಷ್ಟ್ರದ ಹೊಣೆಯಾಗಿದೆ.

ಹೇಗ್ ಒಡಂಬಡಿಕೆಗೆ ಬದ್ಧವಾದ ರಾಷ್ಟ್ರಗಳೆಲ್ಲ ಸಾಂಸ್ಕೃತಿಕ ಸೊತ್ತುಗಳನ್ನು ಯುದ್ಧ ಕಾಲದಲ್ಲಿ ರಕ್ಷಿಸುವುದಕ್ಕೆ ಶಾಂತಿಯ ಸಮಯದಲ್ಲಿ ಸೂಕ್ತವಾದ ಸಿದ್ಧತೆಯನ್ನು ಮಾಡಬೇಕು (ಅನುಚ್ಛೇದ 3). ತಮ್ಮ ಮತ್ತು ಇತರ ರಾಷ್ಟ್ರಗಳ ಭೂಕ್ಷೇತ್ರದಲ್ಲಿರುವ ಸಾಂಸ್ಕೃತಿಕ ಸೊತ್ತುಗಳನ್ನು ಮತ್ತು ಅವುಗಳು ಇರುವ ಸ್ಥಳಗಳನ್ನು ಯುದ್ಧ ಸಮಯದಲ್ಲಿ ಯಾವುದೇ ತೊಂದರೆಯಾಗದಂತೆ ಸಂರಕ್ಷಿಸಬೇಕು. ಅವುಗಳ ಕಳ್ಳತನ, ಧ್ವಂಸ ಮತ್ತು ದುರುಪಯೋಗಗಳನ್ನು ತಡೆಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಅವುಗಳನ್ನು ಸ್ವಾಧೀನಪಡಿಸಿಕೊಳ್ಳಬಾರದು. ಅವುಗಳನ್ನು ಧಾಳಿಯ ಗುರಿಯನ್ನಾಗಿಡುವುದು ಮತ್ತು ಅವುಗಳಿರುವ ಜಾಗಗಳನ್ನು ಧ್ವಂಸ ಅಥವಾ ನಾಶದ ಅಪಾಯಕ್ಕೆ ಒಡ್ಡುವುದು ನಿಷೇಧಿತವಾಗಿದೆ (ಅನುಚ್ಛೇದ 4). ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಭೂಕ್ಷೇತ್ರವನ್ನು ತನ್ನ ಸ್ವಾಧೀನದಲ್ಲಿರಿಸುವಾಗ ಅದರ (ಎರಡನೆಯದರ) ರಾಷ್ಟ್ರೀಯ ಪ್ರಾಧಿಕಾರವು ಸಾಂಸ್ಕೃತಿಕ ಸೊತ್ತುಗಳನ್ನು ರಕ್ಷಿಸುವ ಕ್ರಮಗಳನ್ನು ಬೆಂಬಲಿಸಬೇಕು (ಅನುಚ್ಛೇದ 5). ಸಾಂಸ್ಕೃತಿಕ ಸೊತ್ತುಗಳನ್ನು ಗುರುತಿಸುವ ರೀತಿಯ ಚಿಹ್ನೆಗಳನ್ನು ಕಾಣುವಂತೆ ಪ್ರದರ್ಶಿಸಬೇಕು. (ಅನುಚ್ಛೇದ 6). ಮಿಲಿಟರಿ ಸೇನೆಗಳಿಗೆ ಸಾಂಸ್ಕೃತಿಕ ಸೊತ್ತುಗಳನ್ನು ರಕ್ಷಿಸುವ ಕುರಿತು ಸಾಕಷ್ಟು ಮಾಹಿತಿ ನೀಡಬೇಕು (ಅನುಚ್ಛೇದ 7). ಚರ ಸಾಂಸ್ಕೃತಿಕ ಸೊತ್ತುಗಳ ರಕ್ಷಣೆಗೆ ವಿಶೇಷವಾದ ಆಶ್ರಯಗಳನ್ನು ನಿರ್ಮಿಸಿ ಅವುಗಳನ್ನು ರಕ್ಷಿಸಬೇಕು (ಅನುಚ್ಛೇದ 8). ಸಂಘರ್ಷದ ಸಮಯದಲ್ಲಿ ಸಾಂಸ್ಕೃತಿಕ ಸೊತ್ತುಗಳು ವಿಶೇಷ ರಕ್ಷಣೆ ಮತ್ತು ಉನ್ಮುಕ್ತಿಗಳನ್ನು ಹೊಂದತಕ್ಕುದು (ಅನುಚ್ಛೇದ 9). ಯಾವುದೇ ಸಾಂಸ್ಕೃತಿಕ ಸೊತ್ತು ಈ ಕೆಳಗಿನ ಮೂರು ಷರತ್ತುಗಳನ್ನು ಪೂರೈಸಿದಲ್ಲಿ ಉನ್ನತ ರಕ್ಷಣೆಯನ್ನು ಪಡೆಯಲು ಅರ್ಹವಾಗುತ್ತವೆ: (1) ಅದು ಮಾನವ ಕುಲಕ್ಕೆ ಅತ್ಯಂತ ಮಹತ್ವವುಳ್ಳ ಸಾಂಸ್ಕೃತಿಕ ಬಳುವಳಿಯಾಗಿರಬೇಕು (2) ಅದನ್ನು ಸಮರ್ಪಕ ಕಾನೂನಿನ ಮತ್ತು ಆಡಳಿತಾತ್ಮಕ ಕ್ರಮಗಳ ಮೂಲಕ ಮನ್ನಿಸಲಾಗಿರಬೇಕು, ಮತ್ತು (3) ಅದನ್ನು ಸೇನೆಯ ಉದ್ದೇಶಕ್ಕಾಗಿ ಬಳಸಿರಬಾರದು ಮತ್ತು ಸಂಬಂಧಿತ ರಾಷ್ಟ್ರವು ಈ ಕುರಿತು ಆಶ್ವಾಸಿರಬೇಕು. (ಅನುಚ್ಛೇದ 10).

ಸಂಬಂಧಿತ ರಾಷ್ಟ್ರದ ಕೋರಿಕೆ ಮೇರೆಗೆ ಆ ರಾಷ್ಟ್ರದ ಅಥವಾ ಇತರರ ಭೂಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಮೇಲುಸ್ತುವಾರಿಯಲ್ಲಿ ಯಾವುದೇ ಸಾಂಸ್ಕೃತಿಕ ಸೊತ್ತನ್ನು ರಕ್ಷಣೆಯ ಉದ್ದೇಶಕ್ಕಾಗಿ ಮಾತ್ರ ಸಾಗಾಣಿಕೆ ಮಾಡಲು ಹೇಗ್ ಒಡಂಬಡಿಕೆಯು ಅನುವು ಮಾಡಿದೆ (ಅನುಚ್ಛೇದ 12) ಸೂಕ್ತಸಮಯದಲ್ಲಿ ಸಾಂಸ್ಕೃತಿಕ ಸೊತ್ತುಗಳನ್ನು ಸಾಗಾಣಿಕೆ ಮಾಡುವುದು ಉತ್ತಮ ರಕ್ಷಣೆಯನ್ನು ಕೊಡುತ್ತದೆ.

ಹೇಗ್ ಒಡಂಬಡಿಕೆಯನ್ನು ಒಪ್ಪಿಕೊಂಡ ರಾಷ್ಟ್ರಗಳು ಸಾಂಸ್ಕೃತಿಕ ಸೊತ್ತುಗಳ ಕುರಿತಾಗಿ ಗೌರವ ಮತ್ತು ಸದಭಿಪ್ರಾಯವನ್ನು ಪ್ರಚುರಪಡಿಸಲು ಬದ್ಧರಾಗಿರುತ್ತವೆ. 'ಸೇನೆಯ ಅಗತ್ಯ' ಎಂಬ ಅಪವಾದದ ವ್ಯಾಪ್ತಿಯನ್ನು ಅತ್ಯಂತ ಅವಶ್ಯ ಸಂದರ್ಭಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಯುನೆಸ್ಕೊ ಸಂಸ್ಥೆಗೆ ಸಾಂಸ್ಕೃತಿಕ ಸೊತ್ತುಗಳ ರಕ್ಷಣೆಯ ಕುರಿತು ಮೇಲುಸ್ತುವಾರಿಯ ಕ್ಷೇತ್ರಾಧಿಕಾರವಿದೆ. ಹೇಗ್ ಒಡಂಬಡಿಕೆಯು ಅಂತಾರಾಷ್ಟ್ರೀಯವಲ್ಲದ ಸಶಸ್ತ್ರ ಸಂಘರ್ಷಗಳ ಸಂದರ್ಭದಲ್ಲಿ ಕೂಡಾ ಅನ್ವಯಿಸಬಹುದು (ಅನುಚ್ಛೇದ 19).

ಒಟ್ಟಿನಲ್ಲಿ ಸಾಂಸ್ಕೃತಿಕ ಸೊತ್ತುಗಳು ಬೌದ್ಧಿಕ ಮತ್ತು ಸೃಜನಾತ್ಮಕ ಪ್ರತಿಭೆ ಮತ್ತು ಶ್ರಮದ ಕೊಡುಗೆಗಳಾಗಿದ್ದು ಜಾಗತಿಕ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟುವ ಕೆಲಸವನ್ನು ಮಾಡುವುದರಿಂದ ಯುದ್ಧ ಮತ್ತು ಸಶಸ್ತ್ರ ಸಂಘರ್ಷಗಳ ಮಧ್ಯ ಅವುಗಳನ್ನು ಪರಿಣಾಮಕಾರಿಯಾಗಿ ರಕ್ಷಿಸುವ ಕೆಲಸವು ಅಂತಾರಾಷ್ಟ್ರೀಯ ಕಾನೂನಿನಲ್ಲಿ ನಡೆದಿದೆ. ಸಾಂಸ್ಕೃತಿಕ ಸೊತ್ತುಗಳನ್ನು ಬರಿಯ ದೇಶದ ಹೆಮ್ಮೆಯಾಗಿ ಮಾತ್ರವಲ್ಲ ಒಟ್ಟು ಮಾನವ ಜನಾಂಗಕ್ಕೆ ಸಲ್ಲುವ ಬಳುವಳಿಯಾಗಿ ನೋಡುವ ದಾರಿಯಲ್ಲಿ ಅಂತಾರಾಷ್ಟ್ರೀಯ ಕಾನೂನು ಸಾಗಿದೆ. ಶಸ್ತ್ರಗಳ ಘರ್ಷಣೆಯ ಕರ್ಕಶ ಸದ್ದಿರಲಿ, ಶಾಂತಿಯ ಮೌನವಿರಲಿ ಕಾನೂನು ಒಂದೇ ಧ್ವನಿಯಲ್ಲಿ ಬಿತ್ತರಗೊಳ್ಳುವುದು ಮತ್ತು ಜನಮಾನಸಕ್ಕೆ ಸಮರ್ಪಕವಾದ ದಾರಿ ತೋರುವುದು ಕಾನೂನಿನ ಆಳ್ವಿಕೆಯ ಸಲ್ಲಕ್ಷಣ ಮತ್ತು ನೈತಿಕತೆಯ ಪ್ರಭುತ್ವ.

❖